Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಹೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

6—1—1962

ಸರ್ವ ಜನರ ಕ್ಷೇಮವನ್ನು ಆಕಾಂಕ್ಷಿಸುವ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಬೆಂಗಳಿಗೆ 6 ಅಣೆ

ಗೋಸಂರಕ್ಷಣೆ ಮಾಡಿ

ಕಾಶೀರದ ಬಗೆ ಆಮೆರಿಕಕ್ಕೆ ಆಸಕ್ತಿ ಇಲ್ಲ

ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆ ಎತ್ತಲು ಅಮೆರಿಕಾ ಉತ್ಸಾಹದಿಂದ ಇಲ್ಲವೆಂದು ಕಾಣುತ್ತದೆ. ಪಾಕಿಸ್ತಾನ ಭದ್ರತಾ ಸಮಿತಿಯ ಮುಂದೆ ಕಾಶ್ಮೀರದ ಸಮಸ್ಯೆ ಬರಬೇಕೆಂದು ಒತ್ತಾಯಪಡಿಸುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳ ಪೈಕಿ ಪಾಕಿಸ್ತಾನದ ಮಿತ್ರ ರಾಷ್ಟ್ರವಾದವರು ಎಷ್ಟು ಆಸಕ್ತರಾಗಿಂವರೊ ಆ ಆಸಕ್ತಿ ಅಮೆರಿಕಕ್ಕೆ ಇಲ್ಲ.

ಪತ್ನಿಯ ಕೊಲೆ

೦೦

ಪತಿ ಮತ್ತಿತರರ ಸೆರೆ

ಬಸವ್ವ (18 ವಯಸ್ಸಿನವಳು ಮುಗ್ಗಯ್ಯ ಎಂಬವನ ಪತ್ನಿ) ಇವಳ ಕೊಲೆ ಆರೋಪದ ಸಂಬಂಧದಲ್ಲಿ 20 ವರ್ಷದ ಮುಗ್ಗಯ್ಯ, ಬಸವಯ್ಯ ಮತ್ತು ಗಂಗೆಗೌಡ ಇವರು ಬಂಧನವಾಗಿದೆ. ತಿ ಪೂರ್ವ ಗ್ರಾಮದಹೊಂಗೆ ಅವಳ ಕೊಲೆ ಆಯಿತೆಂದು ಆರೋಪವಿದೆ. ಮದುವೆಗೆ ಮುಂಚಿಂದಲೂ ಮುಗ್ಗಯ್ಯ ಅವಳೊಡನೆ ಅಕ್ರಮ ಸಂಪರ್ಕದಲ್ಲಿದ್ದು, ಅದೂ ಪ್ರಣಯವಾಗಿ ಅವಳು ಗರ್ಭಿಣಿಯಾದ ಕಾರಣದಿಂದ ಆಗಿದೆ. ಬಸವ್ವ ಸಂತೆ ಹಾಗೂ ಗ್ರಾಮದ ಹಿರಿಯರು ಅವಳನ್ನು ವಿವಾಹವಾಗುವಂತೆ ಒತ್ತಾಯಿಸಿದ ಕಾರಣ ಅವನು 6 ತಿಂಗಳ ಹಿಂದೆ ಮದುವೆ ಆದನು. ಕಳೆದಮಾಹೆ 22 ರಂದು ರಾತ್ರಿ ಬಸವ್ವನ ಕೊಲೆ ಮಾಡಿ, ಗಾಯದ ಹೊಗೆ ತೂಳಿದನೆಂದು ಆರೋಪವಿದೆ. ಅಸಂತಾನ ತಂದೆ ಬಸವಯ್ಯ ಹಾಗೂ ಅಣ್ಣ ಗಂಗೆಗೌಡ ಇವರ ಸಹಾಯದಿಂದ ದೇಹವನ್ನು ಬಿಜ್ಜಹಳ್ಳಿ ಗಾಳಿಯ ಬಾವಿಗೆ ಎಸೆದರೆಂದು ಆರೋಪವಿದೆ.

ಜುನಾವಣೆ ಸಹಕಾರ

ಅಮೃತಸರ 5 — ಅಕಾಲಿದಳ್, ಕಮ್ಯೂನಿಸ್ಟ್, ಪ್ರಜಾಸೋಷಲಿಸ್ಟ್, ಸ್ವತಂತ್ರ, ರಿಪಬ್ಲಿಕ್ ಪಾರ್ಟಿಗಳಲ್ಲಿ, ತಿಕೋಣ ಸ್ಪರ್ಧೆಯನ್ನು ತಪ್ಪಿಸಿ ಕಾಂಗ್ರೆಸ್ಸನ್ನು ಸೋಲಿಸಲು ಒಗ್ಗೂಡಿಸುವಂತೆ ಜನತಾ ವಿಚಾರವಾದಿಯೊಬ್ಬರು ಕರೆಕೊಟ್ಟಿದ್ದಾರೆ.

ಬಾವಿಯಲ್ಲಿ ಶವ

ಅಮೃತಸರ 5— ಲಾಹೋರಿ ಗೇಟ್ ನಲ್ಲಿ ಪೋಲೀಸು ಸ್ಟೇಷನ್ನಿನ ಎದುರಿಗಿರುವ ಭಾವಿಯಿಂದ ಪೋಲೀಸರು ಮೂರು ಹರಿಜನ ಹುಡುಗಿಯರ ಶವಗಳನ್ನು ತೆಗೆದರು

೦೦

ಕಾಂಗ್ರೆಸು ಸಂಸ್ಥೆಯ ವಿಷಯದಲ್ಲಿ ತೋರಿರುವ ನಡವಳಿಕೆಗಳ ಬಗ್ಗೆ ಈ ಕೆಳಗೆ ಕಂಡವರನ್ನು ಕಾಂಗ್ರೆಸಿನಿಂದ 6 ವರ್ಷಗಳ ವರೆಗೆ ಹೊರಹಾಕಿದೆ — ವಿಧಾನಸಭೆಯ ಸದಸ್ಯರಾದ ಶ್ರೀ ಎಸ್. ಕರಿಯಪ್ಪ ಮತ್ತು ಶ್ರೀ ಎಂ. ಹನುಮಂತಯ್ಯ ಮತ್ತು ಕಾಂಗ್ರೆಸಿಗರಾದ ಶ್ರೀಗಳಾದ ಬಿ ಸಿದ್ದೇಗೌಡ, ಎಂ ಬಿ ದ್ದಾನಸ್ ಮತ್ತು ಕೆ ವಿ ವೀರಪ್ಪ.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

7 ಭಾನುವಾರ ವಾಡ್ಯ ಉತ್ತರಾಂದಸಾಢ

ಅಯ್ಯೂಬ್ ಆರೋಪ

ಈಗ ಇರುವ ಕದನವಿರಾಮ ಗೆರೆ ಆಧಾರದ ಮೇಲೆ ಯಾವುದೇ ಒಪ್ಪಂದವನ್ನು ಪಾಕಿಸ್ತಾನ ಅಂಗೀಕರಿಸುವದಿಲ್ಲ ಎಂದು ಪಾಕಿಸ್ತಾನದ ಅಧ್ಯಕ್ಷ ಅಯೂಬ್ ಖಾನರು ತಿಳಿಸಿದರು. ಭಾರತ ಮಾಡಿರುವ ಗೋವಾ ಅಕ್ರಮಣ ದೆಸೆಯಿಂದ ಭಾರತ ನೆರೆಯ ವಿಶ್ವ ಪ್ರದೇಶ ನುಂಗುವುದಿದೆ ಎಂಬುದು ಸ್ಪಷ್ಟವಾಗಿದೆ ಎಂದು ಅವರು ನುಡಿದರು.

ವಿಚಾರ ಗೋಷ್ಠಿ

ಆಕಾಶವಾಣಿ ಬೆಂಗಳೂರು ನಿಲಯ ಈ ದಿನ ಹಾಗೂ ಕಳೆದ ನಾಡಿನ ಜಾನಪದ ಸಂಗೀತವನ್ನು ಕುರಿತು ಎರಡು ದಿನಗಳ ವಿಚಾರ ಗೋಷ್ಠಿ ಏರ್ಪಡಿಸಿದೆ. ಈ ಬೆಳಿಗ್ಗೆ 10 ಗಂಟೆಗೆ ಮಾಜಿ ಮಂತ್ರಿ ಶ್ರೀ ಬಿ ಡಿ ಜತ್ತಿಯವರು ಗೋಷ್ಠಿಯನ್ನು ಉದ್ಘಾಟಿಸಿದರು

ಮುಷ್ಕರ ನಿಲ್ಲುವ ಸಂಭವ

ತಿರುವನಂತಪುರಂ 5 — ಕಮ್ಯೂನಿಸ್ಟ್ ಪ್ರೇರಿತ ಕೇರಳ ಕರ್ಷಕ ಸಂಘದ ಸದಸ್ಯರು ನಾಳೆಯಿಂದ ತ್ರಿಚೂರಿನಲ್ಲಿ ಸೇರಲಿರುವ ಕೇರಳ ರೈತ ಚಳುವಳಿ ಭವಿಷ್ಯದ ಬಗ್ಗೆ ಪರಿಶೀಲಿಸುವರು. ಚಳವಳಿಯನ್ನು ವಾಪಸು ಪಡೆಯುವ ಸಂಭವನೀಯವಿದೆ.

ಕೈಮಗ್ಗದ ಸಪ್ತಾಹ

ಇದೇ ದಿನಾಂಕ 7 ರಿಂದ 14 ರವರೆಗೆ 9 ನೆಯ ಅಖಿಲ ಭಾರತ ಕೈಮಗ್ಗ ಸಪ್ತಾಹವು ನಗರದ ಇರ್ವಿನ್ ರಸ್ತೆಯಲ್ಲಿರುವ ಶ್ರೀ ತಿಮ್ಮಯ್ಯಾಚಾರ್ ಭವನದಲ್ಲಿ ನೆರವೇರುವದು

೦೦

ಬಿಜಾಪುರದಿಂದ ವಿಧಾನ ಸಭೆ ಸ್ಥಾನಕ್ಕೆ ಸ್ವತಂತ್ರಪಕ್ಷದ ಟಿಕೆಟ್ ಪಡೆದ ಕಾರ್ಯ ರಾಜ್ಯದ ಸ್ವತಂತ್ರ ಪಕ್ಷದ ಉಪಾಧ್ಯಕ್ಷ ಡಾ|| ನಾಗೂರರು ಪಕ್ಷಕ್ಕೆ ರಾಜೀನಾಮೆ ಇತ್ತಿದ್ದಾರೆ. ಅವರು ಸ್ವತಂತ್ರವಾಗಿ ಸ್ಪರ್ಧಿಸುವರು.

ವಿವಿಧ ವಿಷಯಗಳು

ಶ್ರೀ ಕೃಷ್ಣಪುರಿ 5 — ಪ್ರಧಾನಿ ನೆಹರೂರವರನ್ನು ನೋಡಲು ಕಾಂಗ್ರೆಸಿನ ಅಧಿವೇಶನದಲ್ಲಿ ಜನರು ಗುಂಪು ಹೆಚ್ಚಾಗಿದ್ದರು. ಜನರನ್ನು ಹತೋಟಿಗೆ ಪಡೆಯುವದರಲ್ಲಿ ನೆಹರು ವಿಫಲರಾದರು. ಗುಂಪಿನ ಕಡೆ ನೆಹರು ಧಾವಿಸುವದನ್ನು ತಡೆಯಲು ರಕ್ಷಣಾಧಿಕಾರಿಗಳು ಹಾಗೂ ಕಾಂಗ್ರೆಸಿನ ಸ್ವಯಂ ಸೇವಕರು ತಡೆದರು. ನೆಹರೂರನ್ನು ಸುತ್ತುಗಟ್ಟಿದ ಅಧಿಕಾರಿಗಳಿಂದ ಬಿಡಿಸಿಕೊಳ್ಳಲು ನೆಹರು ಹೊಡೆದರು.

ಶ್ರೀ ಕೃಷ್ಣಪುರಿಯ ಕಾಂಗ್ರೆಸು ಅಧಿವೇಶನದಲ್ಲಿ ಕಾಂಗ್ರೆಸು ಅಧ್ಯಕ್ಷ ಶ್ರೀ ಎ ಸಂಜೀವರೆಡ್ಡಿ ಭಾಷಣಮಾಡುತ್ತ, ಸ್ವತಂತ್ರ ಪಕ್ಷದ ಆರ್ಥಿಕ ನೀತಿ ದೇಶವನ್ನು ನಾಶಮಾಡುವದಾಗಿ ತಿಳಿಸಿದರು

ಅಮೃತಸರ 5 — ಪೋಲೀಸು ಠಾಣೆಗೆ ಎದುರಿಗಿರುವ ಲಾಹೋರಿದ್ವಾರದ ಜಿಲ್ಮಿಕ ದ್ವಾರದ ಒಳಭಾಗದಲ್ಲಿ 6–7 ವರ್ಷ ವಯಸ್ಸಿನ 3 ಹರಿಜನ ಹುಡುಗಿಯರ ಶವ ಪತ್ತೆ ಆಗಿದೆ.

ಕಲ್ಕತ್ತಾದ ಟಿಸ್ಟ್ ಮ್ಯಾಚ್‌ನಲ್ಲಿ ಇಂಗ್ಲೆಂಡಿನ ಮೇಲೆ ಭಾರತ ಗೆದ್ದ ವಿಷಯದಲ್ಲಿ ಇಂಗ್ಲೆಂಡಿನ ಪತ್ರಿಕೆಗಳು ಭಾರತವನ್ನು ಪ್ರಶಂಸಿಸಿವೆ

ದೈವಸೂರು ಪೌಂಸಭೆಯ ಮುಂದೆ ವರದಿ ಈ ಮಾಹೆ 8 ನೆಯ ಶನಿವಾರ ಮಧ್ಯಾಹ್ನ 4 ಗಂಟೆಗೆ ಪರಾವೇಕ್ಷಣಾಗುವದು

ನಾಳೆ ಸಂಜೆ 5–30 ಗಂಟೆಯಿಂದ 6.30 ಗಂಟೆ ವರಿಗೆ ಮೈಸೂರು ನಿಶಾಡೆ ಬಾನಿನಲ್ಲಿ ಕರ್ನಾಟಕ ಬ್ಯಾಂಡಿನ ಕಾರ್ಯಕ್ರಮವಿದೆ

ಶ್ರೀ ಕೃಷ್ಣಪುರಿ 5 — ಕಾಂಗ್ರೆಸಿನ ಚಪ್ಪರದಲ್ಲಿ ಅಪ ನೂಕುನುಗ್ಗಲಿನಿಂದ 25 ಮಂದಿ ಗಾಯಗೊಂಡು ಆಸ್ಪತ್ರೆಗೆ ಸೇರಿದರು

ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ ಸಂಬಂಧಿಸಿದ ಪ್ರದರ್ಶನ

ಮೈಸೂರು 5— ಮೇಲ್ಕಂಡಪ್ರದರ್ಶನವನ್ನು ಮೈಸೂರಿನ ಕೇಂದ್ರಆಹಾರ ಸಂಶೋಧನಾ ಸಂಸ್ಥೆಯ ಡೆಪುಟಿ ಡೈರೆಕ್ಟರು ಡಾ|| ಶೀನವಾಸರ್ಕರವರು, ಮಹಾರಾಜಾ ಕಾಲೇಜು ಯೂನಿಯನ್ ಭವನದಲ್ಲಿ, ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯ ಅಸಿಸ್ಟೆಂಟ್ ಡೈರೆಕ್ಟರು ಡಾ || ಭಾಟಿಯಾರವರು ಅಧ್ಯಕ್ಷತೆಯಲ್ಲಿ ಆರಂಭಗೊಳಿಸಿದರು ಬೆಂಗಳೂರಿನಲ್ಲಿರುವ ಅಮೇರಿಕಾ ವಾರ್ತಾ ಸಂಸ್ಥೆಯ ಪುಸ್ತಕಭಂಡಾರದ ಅಧಿಕಾರಿಗಳಾದ ಮಿ|| ಜೋಸೆಫ್ ಎ ಹಾರ್ನರವರು ಪ್ರದರ್ಶನದ ಪರಿಚಯ ಮಾಡಿಕೊಟ್ಟರು. ಮೈಸೂರಿನ ಭಾರತ-ಅಮೇರಿಕಾ ಸಂಘ ವತ್ತು, ಅಮೇರಿಕಾ ವಾರ್ತಾ ಸಂಸ್ಥೆಗಳ ಆಶ್ರಯದಲ್ಲಿ ಈ ಪ್ರದರ್ಶನವು ಏರ್ಪಡಿಸಲಾಗಿದೆ ಪ್ರದರ್ಶನಕ್ಕೆ ಪ್ರವೇಶ ಉಚಿತ: ವಶ, ಇದು ತಾ|| ರವರೆಗೂ ಬೆಳಿಗ್ಗೆ ವ.ಶ, ಸಂಜೆ ಯಾರು-ಬೇಕಾದರೂ ನೋಡಲು ಅವಕಾಶವಿದೆ: ಸಂಜೆ ಅಮೆರಿಕಾದ ವಿದ್ಯಾರ್ಥಿ ಜೀವನ-ಹಾಗೂ ಶಿಕ್ಷಣ ಕುರಿತ ಉಪನ್ಯಾಸ ಮಾಲೆಗಳೂ ಏರ್ಪಡಿಸಲಾಗಿದೆ. ಕೇರಳ ಹಾಗೂ ವಿದಂತಸಿನ ನಾನಾ ಸ್ಥಳಗಳಲ್ಲಿ ಪ್ರದರ್ಶಿಸಿ ಮೆಚ್ಚುಗೆ ಪಡೆದಿರುವ ಈ ಪ್ರದರ್ಶನವು ಮೈಸೂರಿನಲ್ಲೂ ಯಶಸ್ವಿಯಾಗಿ ನಡೆಯಲೆಂದು ಕೋರುತ್ತೇನೆ.

28 ಚಿತ್ರಮಾಲೆಗಳ ಮೂಲಕ ಅಮೇರಿಕಾದ ಪೌಢ ಶಿಕ್ಷಣದ ಪರಿಚಯ ಮಾಡಿಕೊಡಲಾಗಿದೆ : ವಿದ್ಯಾರ್ಥಿಗಳ ಆಶಾಪ್ಪಲಿನ ಒಂದು ಮಾದರಿಯೂ ಪ್ರದರ್ಶನದಲ್ಲಿದೆ ; ವಿದ್ಯಾರ್ಥಿಗಳ ಪಾಶ್ಚಿತ್ಯರ ಚಟುವಟಿಕೆಗಳೂ, ಕ್ರೀಡಾಸೌಕರ್ಯಗಳೂ, ವಿದೇಶಿ ವಿದ್ಯಾರ್ಥಿಗಳಿಗಾಗಿ ಏರ್ಪಡುವ ಕಾರ್ಯಕ್ರಮಗಳೂ ಒಳಗೊಂಡ ಅಮೇರಿಕಾ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ಜೀವನದ ನಾನಾ ಮುಖಗಳ ಸವಿವರ ಚಿತ್ರ ಈ ಪ್ರದರ್ಶನದಲ್ಲಿ ತೋರಿಸಲಾಗಿದೆ ; ಎಲ್ಲವೂ ಕರತಲಾಮಲಕವಾಗಿ ವಿವರಿಸಲಾಗಿದೆ : ವಿದ್ಯಾರ್ಥಿಗಳು ವಿದ್ಯಾರ್ಜನೆಯ ಜೊತೆಗೆ ಶ್ರಮಿಸಿ ಇತರ ವಿಷಯಗಳನ್ನೂ ಅರಿತುಕೊಳ್ಳಲು ಅವಕಾಶವಿದೆ; ಕನ್ನಡಿಕ ಅವರ ಪ್ರಯಾಸಂಗದ ಖರ್ಚು ಬಹುಮಟ್ಟಿಗೆ ಕಡಮೆಯಾಗುತ್ತದೆ

ಈ ಸಾಧ್ಯವೂ ಅನೇಕ ವಿಷಯಗಳನ್ನು ಅರಿಯಲು ಸಹಾಯಕವೂ ಆಗಿರುವ ಈ ಪ್ರದರ್ಶನವನ್ನು ಏರ್ಪಡಿಸಿದವರು ಪ್ರಶಂಸೆಗೆ ಪಾತ್ರರು.

———

ಸಿನಿಮಾ ಪೋಸ್ಟರುಗಳ ಪರಿಶೀಲನಾ ಸಮಿತಿ

ಸದಸ್ಯರು— ಮುಂಬೈನಲ್ಲಿ ಪ್ರಯಾರಾಗುವ ಚಲಚ್ಚಿತ್ರಗಳ ಪೋಸ್ಟರುಗಳನ್ನು ಅವುಗಳ ಪ್ರಕಟಣೆಯ ಪೂರ್ವದಲ್ಲಿಯೇ ಪರಿಶೀಲಿಸುವುದಕ್ಕಾಗಿ ಭಾರತ ಸರಕಾರದವರು ವಿಖ್ಯಾತ ಚಿತ್ರತಯಾರಕರ ಸಮಿತಿಯೊಂದನ್ನು ಅನೌಪಚಾರಿಕವಾಗಿ ರಚಿಸಿದ್ದಾರೆ.

ಅಮೆರಿಕದ ವಿದ್ಯಾರ್ಥಿ ಜೀವನವನ್ನು
ಕುರಿತ ಚಿತ್ರಗಳ ಪ್ರದರ್ಶನ

★ ವಿದ್ಯಾರ್ಥಿಗಳ ಸ್ನೇಹ ಜೀವನ
ಅವರ ಯೋಗಕ್ಷೇಮಕ್ಕೆ ಸಲ್ಲುವ ಲಕ್ಷ್ಯ

★ ವಿದ್ಯಾರ್ಥಿ--ಉಪಾಧ್ಯಾಯರುಗಳ ನಡುವಿನ
ಅನೌಪಚಾರಿಕ ಸಂಬಂಧ

★ ವಿದ್ವತ್ಸಾಧನೆಗೆ ಸಲ್ಲುವ ಮಹತ್ವ

★ ವಿದ್ಯಾರ್ಥಿಗಳೇ ಏರ್ಪಡಿಸುವ ಸಹಕಾರ

★ ಪಾಠೇತರ ಚಟುವಟಿಕೆಗಳ ವಿಸ್ತಾರ ವೈವಿಧ್ಯ

ಇಂಥಹ ಅಮೆರಿಕದ ವಿದ್ಯಾರ್ಥಿಗಳ ಜೀವನದ
ನಾನಾ ಮುಖಗಳನ್ನು ನಿರೂಪಿಸುವ ಪ್ರದರ್ಶನ

1962 ರ ಜನವರಿ 6 ರಿಂದ 11 ರ ವರೆಗೆ
ಮೈಸೂರಿನಲ್ಲಿ ನಡೆಯುತ್ತದೆ

ಎಲ್ಲರಿಗೂ ಆದರದ ಸ್ವಾಗತ | ಸ್ಥಳ ಮಹಾರಾಜಾ ಕಾಲೇಜ್ ಯೂನಿಯನ್ ಕಲ | ಬೆಳಿಗ್ಗೆ 9 ರಿಂದ 12 : ಸಂಜೆ 4 ರಿಂದ 8

USG-1

ವುಡ್‌ಲ್ಯಾಂಡ್ಸ್ ಜನಪ್ರಿಯ 5 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪರಾಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ
ಅತ್ಯಂತ ಮನಂಜನ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— ಜನಭರಿತ 2 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಜಲಕ್ಷ್ಮಿ, ಹರಿಣಿ, ನಂಜಿಂಡರಾಜು
ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

For Quality Printing
L. N. Press
Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ಕ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Help ' The Goraksana '

Advertise in Goraksana and help the pious cause

SHAKTI
SUDHA

A Superb Tonic

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.